**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 755/2023**

**ಸಾಕ್ಷಿಯನ್ನು ದಿಃ 12.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಲೋಲಾಕ್ಷಿ ಟಿ.ಎಸ್ | ಸಿಡಬ್ಲ್ಯೂ:20 | ಪಿಡಬ್ಲ್ಯೂ:8 |
| ಗಂಡನ ಹೆಸರು | ಶ್ರೀನಿವಾಸ್ ಯಾದವ್ | | |
| ವಯಸ್ಸು | 43 ವರ್ಷ | | |
| ಕೆಲಸ | ಪಿ.ಐ ಲಷ್ಕರ್ ಪೊಲೀಸ್ ಠಾಣೆ<br>ಮೈಸೂರು ಜಿಲ್ಲಾ ಕಛೇರಿ | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 09.08.2023 ರಿಂದ ದಿಃ 06.06.2025 ವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 12.11.2023 ರಂದು ಚಾಸಾ-19 ರವರಿಂದ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡು ಪರಿಶೀಲಿಸಿರುತ್ತೇನೆ.

ಅದೇ ದಿನ ಬೆಳಿಗ್ಗೆ 8 ರಿಂದ 9-00 ಗಂಟೆಯವರೆಗೆ ಚಾಸಾ-1 ರವರು ತೋರಿಸಿದ ಕೃತ್ಯ ನಡೆದ ಸ್ಥಳದ ಮಹಜರನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ಜರುಗಿಸಿರುತ್ತೇನೆ. ಸ್ಥಳದ ಕಚ್ಚಾ ನಕ್ಷೆ ತಯಾರಿಸಿ ಪೋಟೋ ತೆಗೆಸಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-6 ರಿಂದ 8 ರಿಂದ ಗುರುತಿಸಲಾಗಿದ್ದು, ನಿಪಿ-6 ಮತ್ತು 7 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-6(ಬಿ), 7(ಬಿ) ಎಂದು ಗುರುತಿಸಲಾಯಿತು. ನಿಪಿ-7 ರ ಪೋಟೋ ನೋಡಿ ಗುರುತಿಸಿರುತ್ತಾರೆ. ಅದೇ ದಿನ ಬೆಳಿಗ್ಗೆ 10 ರಿಂದ 12-30 ರವರೆಗೆ ಶವ ತನಿಖಾ ವರದಿಯನ್ನು ಚಾಸಾ-6 ರಿಂದ 8 ರವರ ಸಮಕ್ಷಮ ಶವಾಗಾರದಲ್ಲಿ ಶವ ತನಿಖಾ ವರದಿಯನ್ನು

ಜರುಗಿಸಿರುತ್ತೇನೆ. ಸದರಿ ಶವ ತನಿಖಾ ವರದಿಯನ್ನು ಆರೋಪಿ ಪರ ವಕೀಲರ ಸಮ್ಮತಿ ಮೇರೆಗೆ ನಿಪಿ-12 ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 2 ರಿಂದ 2-30 ರವರೆಗೆ ಚಾಸಾ-14 ರವರು ತೋರಿಸಿದ ಮೇರೆಗೆ ಠಾಣಾ ಆವರಣದಲ್ಲಿದ್ದ ವಾಹನಗಳ ಅಮಾನತ್ತು ಪಂಚನಾಮೆ ಚಾಸಾ-11 ಮತ್ತು 12 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಅಮಾನತ್ತು ಮಹಜರನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ವಾಹನಗಳ ಪೋಟೋ ತೆಗೆದಿದ್ದು ಅವುಗಳನ್ನು ಈಗಾಗಲೇ ನಿಪಿ-1 ರಿಂದ 3 ಎಂದು ಗುರುತಿಸಲಾಗಿದೆ. ಅಮಾನತ್ತು ಪಡಿಸಿದ ವಾಹನಗಳನ್ನು ಪಿ ಎಫ್ 265-2023 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-3 ಮತ್ತು 4 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

ದಿಃ 13.11.2023 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆ ಪಡೆದುಕೊಂಡಿರುತ್ತೇನೆ. ಹಾಗೂ ಚಾಸಾ-13 ಮಂಜುನಾಥ್ ಕೆ ಟಿ ಸಿ ರವರಿಗೆ ಐ ಎಂ ವಿ ಕಲಂ 133 ರಡಿ ನೋಟೀಸ್ ನೀಡಿ ಉತ್ತರ ಪಡೆದುಕೊಂಡಿರುತ್ತೇನೆ. ಇಂಡೆಮ್ನಿಟಿ ಬಾಂಡ್ ಪಡೆದು ಕೆ ಎಸ್ ಆರ್ ಟಿ ಸಿ ಬಸನ್ನು ಅವರ ವಶಕ್ಕೆ ನೀಡಿರುತ್ತೇನೆ. ಸದರಿ ಸದರಿ ನೋಟೀಸ್, ಉತ್ತರ ಹಾಗೂ ಬಾಂಡನ್ನು ನಿಪಿ-13 ರಿಂದ 15 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ- 13(ಎ) ರಿಂದ 15(ಎ) ಎಂದು ಗುರುತಿಸಲಾಯಿತು.

ದಿಃ 15.11.2023 ರಂದು ಚಾಸಾ-17 ರವರಿಂದ ಪಿ ಎಂ ವರದಿ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಆರೋಪಿ ಪರ ಸಮ್ಮತಿ ಮೇರೆಗೆ ನಿಪಿ-16 ಎಂದು ಗುರುತಿಸಲಾಯಿತು. ಹಾಗೂ ಕೆ ವಿ ಸಿ ಆಸ್ಪತ್ರೆಯ ವೈದ್ಯರಿಂದ ಭಾಸ್ಕರ ಎಂಬುವವರ ಗಾಯದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಆರೋಪಿ ಪರ ಸಮ್ಮತಿ ಮೇರೆಗೆ ನಿಪಿ-17 ಎಂದು ಗುರುತಿಸಲಾಯಿತು.

ದಿಃ 21.11.2023 ರಂದು ಚಾಸಾ-2 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

ದಿಃ29.11.2023 ರಂದು ಚಾಸಾ-2 ರವರಿಂದ ಇಂಡೆಮ್ನಿಟಿ ಬಾಂಡ್ ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಬಾಂಡನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು

ನಿಪಿ-4(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-18 ರವರಿಂದ ಐಎಂವಿ ವರದಿ ಪಡೆದಿರುತ್ತೇನೆ. ಸದರಿ ಐ ಎಂ ವಿ ವರದಿಯನ್ನು ಆರೋಪಿ ಪರ ಸಮ್ಮತಿ ಮೇರೆಗೆ ನಿಪಿ-18 ಎಂದು ಗುರುತಿಸಲಾಯಿತು.

ದಿಃ 12.11.2023 ರಂದು ಚಾಸಾ-14 ಮತ್ತು 15 ರವರಿಂದ ಭಾ. ಸಾ. ಅ ಕಲಂ 65(ಬಿ) ರಡಿ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಅವುಗಳನ್ನು ಗುರುತಿಸಿದ್ದು, ಅವುಗಳನ್ನು ನಿಪಿ-19, 20 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-19(ಎ), 20(ಎ) ಎಂದು ಗುರುತಿಸಲಾಯಿತು.

ದಿಃ 13.11.2023 ರಂದು ಅರೋಪಿಗೆ ಸಿಆರ್‌ಪಿಸಿ ಕಲಂ 41 (ಎ) ರಡಿ ನೋಟೀಸ್ ನೀಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದು ನ್ಯಾಯಾಲಯಕ್ಕೆ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಸ್.ಎಂ ವಕೀಲರಿಂದಃ**

ಮೈಸೂರು ಹುಣಸೂರು ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಅಪಘಾತ ಆದ ಸ್ಥಳದಲ್ಲಿ ಮೈಸೂರಿನಿಂದ ಬರಬೇಕಾದರೆ ಇಳಿಮುಖವಾಗಿರುತ್ತದೆ, ಹುಣಸೂರು ಕಡೆಯಿಂದ ಬರಬೇಕಾದರೆ ಏರು ಮುಖವಾಗಿರುತ್ತದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಹೆಚ್. ಪಿ ಪೆಟ್ರೋಲ್ ಬಂಕ್ ಮೈಸೂರು ಕಡೆಯಿಂದ ಬರುವಾಗ ಮಿಸ್ಸಾಗಿ ಬಲಭಾಗದಲ್ಲಿ ತೋರಿಸಿರುತ್ತೇನೆ. ಮೃತನಿಗೆ ತಲೆಯ ಭಾಗಕ್ಕೆ ಏಟಾಗಿದೆ ಎಂದು ಕಂಡು ಬಂದಿರುತ್ತದೆ. ಅಪಘಾತದ ಸಮಯದಲ್ಲಿ ಮೃತನು ಹೆಲ್ಮೆಟ್ ಧರಿಸಿದ್ದು ಕಂಡು ಬರುವುದಿಲ್ಲ. ಹಿಂಬದಿ ಸವಾರನು ಕೂಡ ಮೃತನ ಬೈಕಿನಲ್ಲಿ ಹೋಗುತ್ತಿದ್ದಾಗ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ಮೃತನಿಗೆ ಡಿ.ಎಲ್. ಇತ್ತು. ಅದನ್ನು ತನಿಖಾ ಕಾಲದಲ್ಲಿ ಪಡೆದಿಲ್ಲ. ಮೃತನ ಬೈಕಿಗೆ ವಿಮೆ ಇತ್ತು. ಆದರೆ ಅವುಗಳನ್ನು ತನಿಖಾ ಕಾಲದಲ್ಲಿ ಪಡೆದುಕೊಂಡಿಲ್ಲ. ಡಿ ಎಲ್ ಮತ್ತು ವಿಮೆ ಇರದ ಕಾರಣ ಅವುಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಮೃತ ವ್ಯಕ್ತಿಯು ತನ್ನ ಬೈಕನ್ನು ವೇಗವಾಗಿ ಚಾಲನೆ ಮಾಡಿ ಬೇರೆ ವಾಹನವನ್ನು ಓವರ್ ಟೇಕ್ ಮಾಡಿ ಬಸ್ಸಿಗೆ ತಾನೇ ಬಂದು ಡಿಕ್ಕಿಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಮೃತನು ಮತ್ತು ಹಿಂಬದಿ ಸವಾರ ಮದ್ಯಸೇವನೆ ಮಾಡಿ ಬೈಕಿನಲ್ಲಿ ಹೋಗುತ್ತಿದ್ದ ಕಾರಣ ಸದರಿ ಅಪಘಾತ

ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಬೈಕಿನ ಅಥವಾ ಬಸ್ಸಿನ ಗಾಜಿನ ಚೂರುಗಳನ್ನು ವಶಪಡಿಸಿಕೊಂಡಿಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಅಜಾಗರೂಕತೆಯಿಂದ ಅಪಘಾತ ಆಗಿಲ್ಲ ಮೃತನ ತಪ್ಪಿನಿಂದ ಅಪಘಾತ ಅಗಿದ್ದರೂ ಸರಿಯಾಗಿ ತನಿಖೆ ನಡೆಸಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವನ್ನು ಯಾರೂ ಪ್ರತ್ಯಕ್ಷ ವಾಗಿ ನೋಡದಿದ್ದರೂ ಸಾಕ್ಷಿದಾರರನ್ನು ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಮಹಜರನ್ನು ಸ್ಥಳಕ್ಕೆ ಹೋಗಿ ಮಾಡಿರುವುದಿಲ್ಲ ಅವುಗಳನ್ನು ಠಾಣೆಯಲ್ಲಿ ಸೃಷ್ಠಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ರಸ್ತೆ ಸುರಕ್ಷತಾ ದೃಷ್ಠಿಯಿಂದ ಠಾಣಾ ಆವರಣಕ್ಕೆ ವಾಹನಗಳನ್ನು ಸ್ಥಳಾಂತರಿಸಿದ್ದರಿಂದ ಅಲ್ಲಿಯೇ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ಮೃತನ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.